# 2023 ಚಿತ್ರರಂಗದ ಏದುಸಿರು

ಭಾರತೀಯ ಚಿತ್ರೋದ್ಯಮಕ್ಕೆ 2023ರ ಪೂರ್ವಾರ್ಧ ಹೇಗಿದೆ? ಆರು ತಿಂಗಳ ಅವಧಿಯಲ್ಲಿ ಭಾರತೀಯ ಭಾಷೆಗಳ ಸಿನಿಮಾದ ಏಳುಬೀಳಿನ ಕಿರುನೋಟ.

■ ವಿಶಾಖ ಎನ್.



ವಿಜಯ್ ಅಭಿನಯದ 'ವಾರಿಸು' ತೆಲುಗಿನಲ್ಲಿ ರೀಮೇಕ್ ಆಗಿ ಉತ್ತಮ ಗಳಿಕೆ ಕಂಡಿದೆ.

**₹4868** ಕೋಟಿ ಬಾಕ್ಸ್‌ಆಫೀಸ್ ಸಂಗ್ರಹ. ಇದರಲ್ಲಿ ಕನ್ನಡ ಸಿನಿಮಾದ ಕಾಣಿಕೆ ಶೇ. 2 ಮಾತ್ರ. 2023ರ ಜನವರಿಯಿಂದ ಜೂನ್‌ವರೆಗೆ ಭಾರತೀಯ ಚಿತ್ರರಂಗದ ಈ ವಹಿವಾಟು ಮಹತ್ವದ ವಿದ್ಯಮಾನವೊಂದಕ್ಕೆ ಕನ್ನಡಿ ಹಿಡಿಯುತ್ತಿದೆ.

ಹಿಂದಿ, ತೆಲುಗು, ತಮಿಳು, ಮಲೆಯಾಳಂ, ಕನ್ನಡ, ಪಂಜಾಬಿ, ಮರಾಠಿ – ಹೀಗೆ ಪ್ರಮುಖ ಚಿತ್ರರಂಗಗಳೆಲ್ಲ ಸೇರಿ ಈ ವರ್ಷದ ಮೊದಲ ಅರ್ಧದಲ್ಲಿ ನಡೆಸಿರುವ ವಹಿವಾಟು ಕಳೆದ ವರ್ಷದ ಇದೇ ಅವಧಿಯದ್ದಕ್ಕೆ ಹೋಲಿಸಿದರೆ ಶೇ. 15ರಷ್ಟು ಕಡಿಮೆಯಾಗಿದೆ. ವರ್ಷದಲ್ಲಿ ಇದುವರೆಗೆ ಬಾಕ್ಸ್‌ಆಫೀಸ್ ಗಳಿಕೆಯಲ್ಲಿ ಮೊದಲ ಸ್ಥಾನದಲ್ಲಿ ಇರುವ ಸಿನಿಮಾ 'ಪಠಾಣ್' ಎನ್ನುವುದು ಕೂಡ ತಲೆ ಕೆರೆದುಕೊಳ್ಳುವಂತೆ ಮಾಡುತ್ತದೆ. ಅದಕ್ಕಿಂತ ಆಸಕ್ತಿಕರವೆಂದರೆ, ವಿವಾದಗಳ ಮೂಟೆಗಳನ್ನೇ ಮೈಮೇಲೆ ಎಳೆದುಕೊಂಡ 'ಆದಿಪುರುಷ್' ಸಿನಿಮಾ ಗಳಿಕೆಯಲ್ಲಿ ಎರಡನೆಯ ಸ್ಥಾನದಲ್ಲಿ ಇರುವುದು.

ಆರು ತಿಂಗಳಲ್ಲಿ ದೇಶದ ಸಿನಿಮಾರಂಗದ ವಹಿವಾಟಿನ ಶೇ. 13ರಷ್ಟು 'ಪಠಾಣ್' ಹಿಂದಿ ಸಿನಿಮಾ ಒಂದೇ ಮಾಡಿದೆ. ಇದುವರೆಗೆ ಮಾರುಕಟ್ಟೆಯಲ್ಲಿ ತಮ್ಮ ಸ್ಥಿತಿ ಇಳಿಕೆಯಲ್ಲಿದೆ ಎನ್ನುವಂತಿದ್ದ ಶಾರುಖ್ ಖಾನ್ ಅವರಿಗೆ ಮರುಜೀವ ನೀಡಿರುವ ಚಿತ್ರವಿದು. ಇದರ ಯಶಸ್ಸಿನಿಂದಲೇ ಅವರ ಮುಂದಿನ ಎರಡು ಹಿಂದಿ ಸಿನಿಮಾಗಳು– 'ಜವಾನ್' ಹಾಗೂ 'ಡಂಕಿ'– ಸ್ಯಾಟಲೈಟ್ ಹಕ್ಕಿನ ಮಾರುಕಟ್ಟೆಯಲ್ಲಿ ಸದ್ದು ಮಾಡಿವೆ. 'ಜವಾನ್' ಸಿನಿಮಾ ಒಂದಕ್ಕೇ ₹250 ಕೋಟಿ ರೂಪಾಯಿ ಸ್ಯಾಟಲೈಟ್ ಹಕ್ಕು ತಂದುಕೊಟ್ಟಿರುವ ಸುದ್ದಿ ಇದೆ. ಕಳೆದ ಒಂದೂವರೆ ದಶಕದಿಂದಲೂ ಒಬ್ಬೊಬ್ಬ ಸೂಪರ್‌ಸ್ಟಾರ್‌ನನ್ನು ನೀಡದ ಹಿಂದಿ ಚಿತ್ರರಂಗದಲ್ಲಿ ಮತ್ತೆ ಶಾರುಖ್ ಖಾನ್ ವಿಜೃಂಭಿಸುತ್ತಿರುವುದನ್ನು ಹೇಗೆ ಅರ್ಥೈಸಬೇಕು ಎನ್ನುವುದು ಕೂಡ ಸಿನಿಮಾ ಪಂಡಿತರಿಗೆ ಗೋಜಲಿನ ಸಂಗತಿಯಾಗಿದೆ.

ಹೋದ ವರ್ಷದ ಮೊದಲ ಆರು ತಿಂಗಳಲ್ಲಿ ಕನ್ನಡ ಚಿತ್ರರಂಗದ ಗಳಿಕೆಯು ಭಾರತೀಯ ಚಿತ್ರರಂಗದ ಒಟ್ಟಾರೆ ಆದಾಯದ ಶೇ. 8ರಷ್ಟಿತ್ತು. ಈ ಸಲ ಇದು ಶೇ. 2ಕ್ಕೆ ಕುಸಿದಿರುವುದು ಗಮನಾರ್ಹ. ಹಿಂದಿ ಚಿತ್ರರಂಗವು ಒಟ್ಟಾರೆ ಗಳಿಕೆಯ ಶೇ. 37ರಷ್ಟು ಪಾಲನ್ನು ಹೊಂದಿದೆ. ತೆಲುಗಿನ ಪಾಲು ಶೇ. 20 ಆದರೆ, ತಮಿಳಿನದ್ದು ಶೇ. 17 ಇದೆ. ಹಾಲಿವುಡ್ ಸಿನಿಮಾಗಳಿಂದ ಬಾಕ್ಸ್‌ಆಫೀಸ್‌ಗೆ ಶೇ. 12ರಷ್ಟು ಹಣ ಬಂದಿದ್ದರೆ, ಮಲೆಯಾಳಂ ಕೂಡ ಶೇ. 5ರಷ್ಟು ಗಳಿಸಿದೆ. ಪಂಜಾಬಿ ಚಿತ್ರಗಳು ಕನ್ನಡಕ್ಕಿಂತ ಶೇ. 1ರಷ್ಟು ಹೆಚ್ಚು ಆದಾಯ ಗಳಿಸಿರುವುದು ಕೂಡ ಆಸಕ್ತಿಕರ.

ಕಳೆದ ವರ್ಷ 'ಕೆ.ಜಿ.ಎಫ್: ಚಾಪ್ಟರ್ 2' ಹಾಗೂ 'ಆರ್‌ಆರ್‌ಆರ್' ಸಿನಿಮಾಗಳಿಂದಾಗಿ ದೇಶದ ಚಲನಚಿತ್ರಗಳ ಒಟ್ಟು ಗಳಿಕೆಯಲ್ಲಿ ಅರ್ಧದಷ್ಟು ಪಾಲು ದಕ್ಷಿಣ ಭಾರತದ ಸಿನಿಮಾಗಳದ್ದೇ ಇತ್ತು. ಹಿಂದಿ ಸಿನಿಮಾಗಳ ಗಳಿಕೆ ಶೇ. 33ರಷ್ಟು ಇತ್ತಷ್ಟೆ.

ಜೂನ್ ತಿಂಗಳಿನಿಂದ ಸಿನಿಮಾಗಳಿಗೆ ಶುಕ್ರದೆಸೆ ಶುರುವಾಗಿದೆ ಎನ್ನುವುದು ಕೂಡ ನಿಜ. ವರ್ಷದ ಮೊದಲರ್ಧ ಭಾಗದ ಒಟ್ಟಾರೆ ಗಳಿಕೆಗೆ ಹೆಚ್ಚು ಕಾಣಿಕೆ ಹರಿದುಬಂದಿರುವುದು ಇದೇ ತಿಂಗಳು. ಹೀಗಾಗಿ ಮುಂದಿನ ಅರ್ಧ ವರ್ಷ




'ಸಲಾರ್' ನಿರೀಕ್ಷೆಯಲ್ಲಿ...




ಬಲಗಂ